ಕರ್ನಾಟಕ ವಿಧಾನ ಪರಿಷತ್ತು

ಸದಸ್ಯರ ಹೆಸರು	ಶ್ರೀ ಎಸ್.ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ).
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	261 (93)
ಉತ್ತರಿಸಬೇಕಾದ ದಿನಾಂಕ	14.09.2021
ಉತ್ತರಿಸುವವರು	ನಗರಾಭಿವೃದ್ಧಿ ಸಚಿವರು

ಕ್ರ. ಸಂ	ವಿಷಯ	ಉತ್ತರ
ಅ)	ಮೈಸೂರು ನಗರದ ಮೂಡಾ ಪ್ರಾಧಿಕಾರದ ಹೊಸ ಬಡಾವಣೆಗಳಿಗೆ ಕುಡಿಯುವ ನೀರನ್ನು ಸರಬರಾಜು ಮಾಡಲು ಉದ್ದೇಶಿಸಿರುವ ಹಳೇ ಉಂಡವಾಡಿ ಕುಡಿಯುವ ನೀರು ಸರಬರಾಜು ಯೋಜನೆ ಯಾವ ಹಂತದಲ್ಲಿದೆ: ಇದರ ಅಂದಾಜು ವೆಚ್ಚ ಎಷ್ಟು: ಇದರಿಂದ ಅಂದಾಜು ಎಷ್ಟು ಪ್ರಮಾಣದ ನೀರನ್ನು ಮೈಸೂರು ನಗರಕ್ಕೆ ಸರಬರಾಜು ಮಾಡಲು ಉದ್ದೇಶಿಸಲಾಗಿದೆ : ಇದೂವರೆಗೆ ಈ ಯೋಜನೆಗೆ ಆಗಿರುವ ವೆಚ್ಚ ಎಷ್ಟು: ಯೋಜನೆ ಯಾವ ಹಂತದಲ್ಲಿದೆ: (ವಿವರ ಒದಗಿಸುವುದು)	ಹಳೇ ಉಂಡವಾಡಿ ಗ್ರಾಮದ ಬಳಿ ಕಾವೇರಿ ನದಿ ಮೂಲದಿಂದ ಮೈಸೂರು ನಗರ, ಹಾಗೂ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ಹಾಗೂ ಮೈಸೂರು ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಮತ್ತು ವ್ಯಾಪ್ತಿಯ ಹೊರಗಡೆ ಬರುವ ಗ್ರಾಮಗಳಿಗೆ ಕುಡಿಯುವ ನೀರು ಸರಬರಾಜು ಯೋಜನೆಯ ಅಂದಾಜು ಮೊತ್ತ ರೂ.350 ಕೋಟಿಗಳಿಗೆ ಸರ್ಕಾರ ಆದೇಶ ಸಂಖ್ಯೆ: ನಅಇ 15 ಯು.ಡಬ್ಲ್ಯೂ.ಎಸ್ 2018, ಬೆಂಗಳೂರು ದಿನಾಂಕ: 21ನೇ ಫೆಬ್ರವರಿ 2019 ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ. ಈ ಯೋಜನೆಯಲ್ಲಿ ನಿರ್ಮಿಸಲಾಗುವ ವಿವಿಧ ಕಾಮಗಾರಿಗಳಿಗೆ ಅವಶ್ಯವಿರುವ 123 ಎಕರೆ 07 ಗುಂಟೆಯ ಜಾಗದ ನೇರ ಖರೀದಿಯ ಮುಖಾಂತರ ಭೂಸ್ವಾಧೀನ ಮಾಡಬೇಕಾಗಿದ್ದು, ಇದಕ್ಕಾಗಿ ರೂ. 25.00 ಕೋಟಿಗಳನ್ನು ಜೂನ್ ೨೦೨೦ ರಲ್ಲಿ ಪ್ರತ್ಯೇಕವಾಗಿ ಮೈಸೂರು ಮತ್ತು ಮಂಡ್ಯ ಜಿಲ್ಲಾಧಿಕಾರಿಗಳಿಗೆ ಠೇವಣಿ ಮಾಡಲಾಗಿದೆ. ಇದರಂತೆ ಭೂಸ್ವಾಧೀನ ಪ್ರಕ್ರಿಯೆಯು ಪ್ರಗತಿಯಲ್ಲಿದೆ. ಮುಂದುವರೆದು ಭೂಸ್ವಾಧೀನಕ್ಕಾಗಿ ಒಟ್ಟಾರೆ ರೂ.100.00 ಕೋಟಿಗಳ ಅವಶ್ಯಕತೆ ಇದ್ದು, ಬಾಕಿ ರೂ.50.00 ಕೋಟಿಗಳನ್ನು ಜಿಲ್ಲಾಧಿಕಾರಿಗಳು ಮೈಸೂರು ಜಿಲ್ಲೆ ಮೈಸೂರು ರವರು ಘನ ಸರ್ಕಾರದ ವಿಶೇಷ ಅನುದಾನದಡಿ ಬಿಡುಗಡೆ ಮಾಡಲು ಕೋರಲಾಗಿದ್ದು, ಇದಕ್ಕೆ ಪ್ರಸ್ತುತ ಆರ್ಥಿಕ ಇಲಾಖೆಯ ಅನುಮೋದನೆ ದೊರೆಯಬೇಕಾಗಿರುತ್ತದೆ. ಅನುಮೋದಿತ ಅಂದಾಜಿನಲ್ಲಿನ 66 ಕೆ.ವಿ ವಿಧ್ಯುತ್ ಮಾರ್ಗ ಅಳವಡಿಕೆ ಕಾಮಗಾರಿ ಹೊರತುಪಡಿಸಿ ಉಳಿದ ಕಾಮಗಾರಿಗಳಿಗೆ ಟೆಂಡರ್ ಅಹ್ವಾನಿಸಿ ಗುತ್ತಿಗೆದಾರರನ್ನು ನೇಮಿಸಲಾಗಿದ್ದು, ಯೋಜನೆಯನ್ನು ಸೆಪ್ಟಂಬರ್ 2023ರೊಳಗೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ. ಸದರಿ ಯೋಜನೆಯ ಜಾಕ್‌ವೆಲ್, ಸ್ಟಿಲ್ಲಿಂಗ್ ಬೇಸಿನ್, ಡ್ರಾಟ್ ಕಾಲುವೆ ಮತ್ತು ಜಲಶುದ್ಧೀಕರಣ ಘಟಕ ಸಂಬಂಧಿತ ವಿನ್ಯಾಸ ಮತ್ತು ನಕ್ಷೆಗಳನ್ನು ತಯಾರಿಸಿ vetting ಮಾಡಲು IISc, ಬೆಂಗಳೂರು ರವರಿಗೆ ನೀಡಲಾಗಿದೆ.

		1. ಕೆ.ಆರ್.ಎಸ್ ಜಲಾಶಯದ ಹಿನ್ನೀರಿನಲ್ಲಿ ಜಾಕ್‌ವೆಲ್, ಸ್ಟಿಲ್ಲಿಂಗ್ ಬೇಸಿನ್ ಮತ್ತು ಡ್ರಾಟ್ ಕಾಲುವೆ ಕಾಮಗಾರಿ ಕೈಗೊಳ್ಳಲು ನೀರು ಒಳಬರದಂತೆ ತಡೆಗಟ್ಟಲು ಕಾಫರ್ ಡ್ಯಾಂ ನಿರ್ಮಿಸಲು ಉದ್ದೇಶಿಸಿದ್ದು, ಜಾಕ್‌ವೆಲ್ ಮತ್ತು ಸ್ಟಿಲ್ಲಿಂಗ್ ಬೇಸಿನ್ ನಿರ್ಮಿಸಲು ಅವಶ್ಯವಿರುವ ಕಾಫರ್ ಡ್ಯಾಂ ಪೂರ್ಣಗೊಂಡಿದ್ದು, ಡ್ರಾಟ್ ಕಾಲುವೆ ನಿರ್ಮಿಸಲು ಅವಶ್ಯವಿರುವ ಕಾಫರ್ ಡ್ಯಾಂ ಭಾಗಶಃ ಪೂರ್ಣಗೊಂಡಿರುತ್ತದೆ. ಜಾಕ್‌ವೆಲ್ ಮತ್ತು ಸ್ಟಿಲ್ಲಿಂಗ್ ಬೇಸಿನ್ ಕಾಮಗಾರಿಗಾಗಿ ಮಣ್ಣು ಅಗೆಯುವ ಕೆಲಸವು ಭೂ ಮಟ್ಟದಿಂದ 65 ಅಡಿ ಆಳದವರೆಗೆ ಪೂರ್ಣಗೊಂಡಿದೆ. 2. ಜಲಶುದ್ಧೀಕರಣ ಘಟಕದ ಆವರಣದಲ್ಲಿ ವಸತಿ ಗೃಹ ನಿರ್ಮಾಣದ ಕೆಲಸ ಪ್ರಗತಿಯಲ್ಲಿದೆ ಮತ್ತು ಜಲಶುದ್ಧೀಕರಣ ಘಟಕ ನಿರ್ಮಿಸಲು ಭೂಮಿಯನ್ನು ಸಮತಟ್ಟುಗೊಳಿಸಲಾಗಿದೆ. ಈ ಯೋಜನೆಯಿಂದ ಮೈಸೂರು ನಗರಕ್ಕೆ 76 ಎಂ.ಎಲ್.ಡಿ ನೀರನ್ನು ಸರಬರಾಜು ಮಾಡಲು ಉದ್ದೇಶಿಸಲಾಗಿದೆ. ಇದುವರೆಗೆ ಈ ಯೋಜನೆಗೆ ರೂ.61.40 ಕೋಟಿಗಳು ವೆಚ್ಚವಾಗಿರುತ್ತದೆ. ಯೋಜನೆಯ ಕಾಮಗಾರಿಗಳು ಪ್ರಗತಿಯಲ್ಲಿದ್ದು ಸೆಪ್ಟಂಬರ್ 2023 ರೊಳಗೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.
ಆ)	ಮೈಸೂರು ಮಹಾನಗರಕ್ಕೆ ಪ್ರತ್ಯೇಕ ನೀರು ಸರಬರಾಜು ಮಂಡಳಿಯನ್ನು ಸ್ಥಾಪಿಸುವ ಬಗ್ಗೆ ಮೈಸೂರು ಮಹಾನಗರದ ಜನತೆ, ಜನಪ್ರತಿನಿಧಿಗಳು ಒತ್ತಾಯ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಮೈಸೂರು ಮಹಾರಾಜರ ಕಾಲದ ವಾಣಿವಿಲಾಸ ವರ್ಕ್ಸ್ ನ್ನು ಮೈಸೂರು ಮಹಾನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಾಗಿ ಪರಿವರ್ತಿಸಲು ಕ್ರಮ ತೆಗೆದುಕೊಳ್ಳಲಾಗುವುದು ಯಾವಾಗ ?	ಮೈಸೂರು ಮಹಾನಗರಕ್ಕೆ ಪ್ರತ್ಯೇಕ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಸ್ಥಾಪಿಸುವ ಬಗ್ಗೆ ಸಾಧಕ-ಭಾಧಕಗಳ ಕುರಿತು ಪರಿಶೀಲಿಸಿ ವರದಿ ಸಲ್ಲಿಸಲು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಇವರಿಗೆ ಸೂಚಿಸಲಾಗಿದೆ.

ಸಂಖ್ಯೆ: ನಅಇ 120 ಯುಎಂಎಸ್ 2021

(ಬಿ.ಎ.ಬಸವರಾಜ)
ನಗರಾಭಿವೃದ್ಧಿ ಸಚಿವರು